ಹೆದರಿಕೆಯೂ ಸುಳಿಯಿತು. ಪ್ರಪಂಚದ ಒಂದು ಅತೀ ನಿರ್ಜನ ಪ್ರದೇಶದಲ್ಲಿ ನಾವಿದ್ದೇವೆ ಎಂಬ ಭಾವ, ಆರ್ಯರ ಬಗ್ಗೆ ಏನನ್ನೂ ತಿಳಿಯಲು ಸಾಧ್ಯವಾಗಲಿಲ್ಲವಲ್ಲ ಎನ್ನುವ ಹತಾಶೆ, ಹಾಗೂ ಈ ವಿಹಾರದಲ್ಲಿಯೂ ಯಾರೂ ಇಲ್ಲವಲ್ಲ ಎಂಬ ನಿರಾಶೆ ಎಲ್ಲವೂ ಸೇರಿ ವಿಚಿತ್ರವಾದ ಏಕಾಂಗಿತನದ ಭಯ ನಮ್ಮನ್ನು ಆವರಿಸುತ್ತಿದ್ದಂತೆ, ತನಗರಿವಿಲ್ಲದೆಯೆ ಆ ಭೀತಿಭಾವವನ್ನು, ವೀಣಾ ಮಗುವಿನಂತೆ ಹೊರಗೆಡಹತೊಡಗಿದಳು, ಕಣಿವೆಯತ್ತ ತಿರುಗಿ ಜೋರಾಗಿ ಕೂಗತೊಡಗಿದಳು:

'ಓ ಸಖ್ಯ ಮುನಿ ಬುದ್ಧ... ಓ ಗುರುವೇ ಲಾಮಾ...
ದಯವಿಟ್ಟು ನೀವಾದರೂ ಬನ್ನಿ... ಬಂದು ತಿಳಿಸಿ...
ಈ ನಿರ್ಜನ ಪ್ರದೇಶದಲ್ಲೇಕೆ ಈ ವಿಹಾರ?'

ಇದ್ದಕ್ಕಿದ್ದಂತೆ ಒಂದು ವಿಚಿತ್ರ ನಡೆಯಿತು. ಎತ್ತರದ ದನಿಯಲ್ಲಿ ಹರಿದ ಅವಳ ಕೂಗು ನಮ್ಮ ಮುಂದಿದ್ದ ಕಣಿವೆಯಲ್ಲಿ ಹಲವು ಬಾರಿ ಪ್ರತಿಧ್ವನಿಗೊಂಡು ಅಲೆ ಅಲೆಯಾಗಿ ಮತ್ತೆ ಮತ್ತೆ ನಮ್ಮ ಕರಣಗಳಿಗೆ ಬಡಿದು, ರೋಮಾಂಚನವಾಯಿತು. ಜೊತೆಗೆ ಆ ಪ್ರತಿಧ್ವನಿ ಎರಡೂ ಕಡೆಯ ಪರ್ವತಗಳಿಗೆ ಮತ್ತೆ ಮತ್ತೆ ಬಡಿದು ಸತತವಾಗಿ ಹರಡಿದ ತರಂಗ ಸಮೂಹ ಕ್ರಮೇಣ ನಯವಾಗುತ್ತ ಸಣ್ಣ ಗುಡುಗಿನ ಶಬ್ದದಂತೆ ಎಲ್ಲಕಡೆಯೂ ಆವರಿಸಿತು. ಆ ವಿಚಿತ್ರ ಅನುಭವಕ್ಕೆ ನಮ್ಮೆಲ್ಲರ ಮನಸ್ಸು ಹುಚ್ಚೆದ್ದು ಕುಣಿಯತೊಡಗಿತು. ನಾನೂ ಆಕೆಯ ಜೊತೆಗೂಡಿ,

'ಬುದ್ಧಂ ಶರಣಂ ಗಛ್ಛಾಮಿ' ಎಂದು ಜೋರಾಗಿ ಕೂಗಿದೆ–ಪ್ರತಿಧ್ವನಿಯ ಪ್ರಭಾವವನ್ನು ಮತ್ತೆ ಮತ್ತೆ ಅನುಭವಿಸಲೆಂದು. ವೀಣಾ ತನ್ನ ಸಂಸ್ಕೃತ ಜ್ಞಾನ ಬಳಸಿ ಮತ್ತೆ ಕೂಗಿದಳು:

'ಅತ್ರ ವಿಹಾರಂ ಕಿಂ ಕಾರಣಂ?'

ನಮ್ಮ ಈ ಕೂಗುಗಳ ಪ್ರತಿಧ್ವನಿಯ ತರಂಗಗಳನ್ನು ಕೇಳಲೆಂದು ನಾವು ತಕ್ಷಣ ಮೌನವಾಗಿ ಕಿವಿಗೊಟ್ಟು ಕೇಳುತ್ತಿದ್ದಂತೆ ನಮ್ಮ ಮೇಲೆಯೆ ಬೇರೆ ಯಾವುದೋ ಶಬ್ದವಾದಂತಾಯಿತು. ಕಣಿವೆಯಿಂದ ಇನ್ನೂ ನಿಲ್ಲದೆ ಬರುತ್ತಿದ್ದ ಶಬ್ದದಲೆಗಳ ಜೊತೆಗೇ ಬೆರೆತ ಈ ಶಬ್ದ ಏನೆಂದು



ಆರ್ಯ ಕಣಿವೆಯಲ್ಲಿ ನಾವು ಕಂಡ ಬಾಲಕಿಯ ಜೊತೆ ವೀಣಾ